**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 459/2025**

| | | | |
|---|---|---|---|
| **ಹೆಸರು** | **:** | **ಶಿವರಾಜ** | **ಚಾಸಾ. 4** |
| **ತಂದೆಯ ಹೆಸರು** | **:** | **ಶ್ರೀಶೈಲ** | **ಪ್ರಾ.ಸಾ. 1** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 09-10-2025** |
| **ಉದ್ಯೋಗ** | **:** | **ಅಬಕರಿ ವೇದೆ** | |
| **ವಾಸಸ್ಥಳ** | **:** | **ಆಳಂದ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 03-09-2019 ರಿಂದ 21-10-2024 ರವರೆಗೆ ಅಬಕಾರಿ ಪೇದೆಯಾಗಿ ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 29-03-2023 ರಂದು ರಾತ್ರಿ 9 ಗಂಟೆ ಸುಮಾರಿಗೆ ನಾನು ಕಛೇರಿಯಲ್ಲಿದ್ದಾಗ ಚಾಸಾ-1ರವರು ನನಗೆ ಮತ್ತು ಚಾಸಾ-5ರವರಿಗೆ ತಿಳಿಸಿದ್ದೇನೆಂದರೆ ಚಿಂಚೋಳಿ ಪಟ್ಟಣದ ಬೀದರ ಕ್ರಾಸ ಹತ್ತಿರ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದೆ ಆದ್ದರಿಂದ ದಾಳಿಗಾಗಿ ಜೊತೆಯಲ್ಲಿ ಬರಲು ತಿಳಿಸಿದರು. ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-1, 5 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ರಾತ್ರಿ 9-00 ಗಂಟೆ ಸುಮಾರಿಗೆ ಹೊರಟು ರಾತ್ರಿ 9-05 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಹೋದಾಗ ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ತನ್ನ ದ್ವಿಚಕ್ರ ವಾಹನವನ್ನು ನಿಲ್ಲಿಸಿ ಓಡಿ ಹೋಗಲು ಪ್ರಯತ್ನಿಸಿರುತ್ತಾನೆ. ಆಗ ನಾವು ಅವನಿಗೆ ಹಿಡಿಯಲು ಪ್ರಯತ್ನಿಸಿದಾಗ ಅವನು ಸಿಕ್ಕಿರುವುದಿಲ್ಲ. ನಂತರ ಚಾಸಾ-1ರವರು ಸದರಿ ದ್ವಿಚಕ್ರ ವಾಹನವನ್ನು ತಪಾಸಣೆ ಮಾಡಲು ಸ್ಥಳದಲ್ಲಿ ಶೋಧನ ಪತ್ರವನ್ನು ತಯಾರಿಸಿ ಶೋಧನೆ ಮಾಡಿದಾಗ ಸದರಿ ವಾಹನದ ಪಕ್ಕದಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ ಚೀಲದಲ್ಲಿ 180 ML ಅಳತೆಯ 15 ಒಟಿ ವಿಸ್ಕಿ ಪೌಚಗಳು, 180 ML ಅಳತೆಯ 20 ಬ್ಲಾಕ ಪೇಪರ ವಿಸ್ಕಿ, 180 ML ಅಳತೆಯ 20 Officer choice, 180 ML ಅಳತೆಯ 12 M.C. ವಿಸ್ಕಿ ಹಾಗೂ 180 ML ಅಳತೆಯ 5 ಐಬಿ ವಿಸ್ಕಿ ಬಾಟಲಗಳು ಸಿಕ್ಕಿರುತ್ತವೆ. ಆ ದಿನ ಓಡಿ ಹೋದ ವ್ಯಕ್ತಿಯನ್ನು ನೋಡಿದರೇ ನನಗೆ ಗುರುತಿಸಲು ಆಗುವುದಿಲ್ಲ.

ನಂತರ ಚಾಸಾ-1ರವರು ಸಿಕ್ಕ ವಸ್ತುಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತಿಯೊಂದರಲ್ಲಿ 3 ಪೌಚ/ಬಾಟಲಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ಪಂಚರ ಸಮಕ್ಷಮ ರಾತ್ರಿ 9.30 ರಿಂದ

10.30ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದಿರುತ್ತಾರೆ. ನಂತರ ಮರಳಿ ಕಛೇರಿಗೆ ಬಂದು ಘಟನೆ ಬಗ್ಗೆ ನಾನು ಹಾಗೂ ಚಾಸಾ-5ರವರು ಚಾಸಾ-7ರವರಿಗೆ ಹೇಳಿಕೆಯನ್ನು ನೀಡಿದ್ದೇನೆ.

ಈಗ ನೋಡುತ್ತಿರುವ 180 ML ಅಳತೆಯ 3 ಒಟಿ ವಿಸ್ಕಿ ಪೌಚಗಳು, 180 ML ಅಳತೆಯ 3 ಬ್ಲಾಕ ಪೇಪರ ವಿಸ್ಕಿ, 180 ML ಅಳತೆಯ 3 Officer choice, 180 ML ಅಳತೆಯ 3 M.C. ವಿಸ್ಕಿ ಹಾಗೂ 180 ML ಅಳತೆಯ 3 ಐಬಿ ವಿಸ್ಕಿ ಬಾಟಲಗಳನ್ನು ನಾವು ಜಪ್ತಿ ಮಾಡಿದ್ದು ಅವುಗಳನ್ನು ಕ್ರಮವಾಗಿ ಮು.ಮಾ-1 ರಿಂದ 5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ASH ವಕೀಲರಿಂದಃ</u>**

ಆ ಸಮಯಕ್ಕೆ ಚುನಾವಣೆ ಇತ್ತು ಎಂದರೆ ಸರಿ. ಆ ದಿನ ರಾಮನವಮಿ ಇತ್ತು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆಗ ಯಾವ ದಿನದಿಂದ ಯಾವ ದಿನದವರೆಗೆ ಮದ್ಯದ ಅಂಗಡಿ ಮುಚ್ಚಲಾಗಿತ್ತು ಎಂದು ನನಗೆ ನೆನಪಿಲ್ಲ. ಸಾಮಾನ್ಯವಾಗಿ ಚುನಾವಣೆ ಇದ್ದಾಗ ಎಲ್ಲಾ ಕಡೆಗೆ ಪೋಲಿಸರ ಕಾವಲು ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ಮಿಲಿಟರಿಯವರು ಸಹ ನಿಂತಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂಬೇಡ್ಕರ ಸರ್ಕಲನ ಪಶ್ಚಿಮ ದಿಕ್ಕಿಗೆ ಹರಿಜನ ವಾಡಾ ಇದೆ ಎಂದರೆ ಸರಿ. ಸದರಿ ಹರಿಜನ ವಾಡಾ ಮುಖ್ಯ ರಸ್ತೆಗೆ ಹತ್ತಿಕೊಂಡು ಎಂದರೆ ಸರಿ. ಆರೋಪಿಯ ಮನೆ ಮುಖ್ಯ ರಸ್ತೆಗೆ ಹತ್ತಿಕೊಂಡು ಇದೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ಮುಖ್ಯ ರಸ್ತೆಗೆ ಹತ್ತಿಕೊಂಡು ಆರೋಪಿ ಕಿರಾಣಿ ಅಂಗಡಿ ಇಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ತಮ್ಮ ವಾಹನಗಳನ್ನು ಮನೆ ಮುಂದೆ ಹಚ್ಚುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆ ದಿನ ಎಷ್ಟು ವಾಹನಗಳನ್ನು ಪರಿಶೀಲನೇ ಮಾಡಿರುತ್ತೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಮೊದಲನೇ ವಾಹನ ಆರೋಪಿಯದೇ ಇರುತ್ತದೆ ಎಂದು ನುಡಿಯುತ್ತಾರೆ. ಆ ದಿನ ಬೇರೆ ವಾಹನಗಳನ್ನು ತಪಾಸಣೆ ಮಾಡಿಲ್ಲ. ಆ ದಿನ ಸ್ಥಳದಲ್ಲಿ ಬೇರೆ ಸಾರ್ವಜನಿಕರು ಇರಲಿಲ್ಲ. ಮನ್ನಾ ಖೇಳಿ-ತಾಂಡೂರ ಬಹಳಷ್ಟು ವಾಹನಗಳು ಚಲಿಸುತ್ತವೆ ಎಂದರೆ ಸರಿ. ಸ್ಥಳದಲ್ಲಿ ವಾಹನ ಪರಿಶೀಲನೆ ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮು.ಮಾ-1 ರಿಂದ 5ನ್ನು ಜಪ್ತಿ ಮಾಡಿರುವ ಬಗ್ಗೆ, ಪಂಚನಾಮೆ ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಾಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**